

ಒಲಿ ಊದುತ್ತಲೇ ಇದ್ದಳು. ಆದ್ರ ಅದು ಹತ್ತಲಾರದಕ್ಕ ಬಾಜೂಕಿದ್ದ ಚಿಮಣಿಯೆಣ್ಣಿ ಬಾಟ್ಲಿ ತಗೊಂಡು ಒಲಿಯೊಳಗ ಸ್ವಲ್ಪ ಸುರಿವಿ ಕಡ್ಡಿ ಗೀರಿದ್ಲು. ಬೆಂಕಿ ಧಿಗ್ಗನೇ ಹೊತ್ತಿಕೊಳ್ತು.

ಮುಂಜ್‌ಮುಂಜಾನೆ ಮಾದೇವಿಯ ರುದ್ರಾವತಾರ ನೋಡಿ ಇನ್ನ ಮನ್ಯಾಗಿದ್ರ ಏನಾದ್ರೂ ಅನಾಹುತವಾಗಬಹುದೆಂದು ಅಡವಿ ದಾರಿ ಹಿಡಿದ ಮೈಲೆಪ್ಪಂದು ಇದ್ದಿಲು ಬಟ್ಟಿ ಇತ್ತು. ಜಾಲಿಗಿಡ ಕಡಿದು ಅವುಗಳನ್ನು ಸುಟ್ಟು ಇದ್ದಿಲನ್ನು ಮಾಡಿ ಟಾಟಾ ಏಸಿ, ಟಂ ಟಂ ಗಾಡಿಯೊಳಗ ಬೇರೆ ಊರಿಗೆ ಲೋಡುಗಳನ್ನು ಕಳಿಸಿ ಉಳಿದಿದ್ದು ಸೈಕಲ್ಲಿನ್ಯಾಗ ಊರೂರು ತಿರುಗಿ ಇಸ್ತ್ರಿ ಅಂಗಡಿಗಳಿಗೆ, ಇನ್ನಿತರರಿಗೆ ಮಾರ್ತಿದ್ದ. ಅದರಿಂದ ಬರ್ತಿದ್ದ ದುಡುಮಿ ಅಷ್ಟಕ್ಕಷ್ಟ ಆದ್ರೂ ತನ್ನ ಖರ್ಚಿಗೆ ಸಾಕಾಗಿ ಉಳಿತಾಯವೇನೂ ಇರತಿರಲಿಲ್ಲ. ಕಾಲು ನೋವಾಗುವಂಗ ಸೈಕಲ್ ತುಳಿದ್ರೂ ದೂರದ ಊರುಗಳಿಗೆ ಹೋಗಾಕ ಆಗದೆ ತನ್ನ ಶ್ರಮಕ್ಕ ತಕ್ಕಂಗ ಹೆಚ್ಚಿನ ಆದಾಯ ಇಲ್ಲದೆಯಿದ್ದದ್ದು ಅವನಿಗೆ ಚಿಂತೆಗೀಡು ಮಾಡಿತ್ತು. ಸೈಕಲ್ ಜಾಗದಾಗ ಬೈಕ್ ಇದ್ದಿದ್ರೆ ದೂರದ ಊರುಗಳಿಗೂ ಹೋಗಿ ಆದಾಯ ಹೆಚ್ಚಿಸಿಕೊಳ್ಳಬಹುದಿತ್ತು ಎಂದು ಆಗಾಗ ಯೋಚ್ನೆನೂ ಮಾಡ್ತಿದ್ದನಾದ್ರೂ 'ಬೈಕ್ ತಗೊಳ್ಳಾಕ ಅಷ್ಟೊಂದು ರೊಕ್ಕ ಆದ್ರೂ ಎಲ್ಲಿ ಅದಾವ?' ಅಂತ ಸುಮ್ಮನಾಗುತ್ತಿದ್ದ. ಒಮ್ಮೊಮ್ಮೆ ಬಕ್ಕಣ ಖಾಲಿಯಾಗಿ ಬೀಡಿ ಸೇದಾಕ ಹೆಣ್ತಿ ಹತ್ರ ರೊಕ್ಕ ಕೇಳಿದ್ರ ಉರಿದು ಬೀಳ್ತಿದ್ದ ಮಾದೇವಿ ಅಪ್ಪಿತಪ್ಪಿಯೂ ತಾನು ಗ್ಯಾಸ್ ಸಿಲೆಂಡರಿಗಂತ ಕೂಡಿಡುತ್ತಿದ್ದ ರೊಕ್ಕದ ವಿಚಾರ ಬಾಯ್‌ಬಿಡುತ್ತಿರಲಿಲ್ಲ.

ಹೊರಾಗ ಸಣ್ಣಗ ಏರತೊಡಗಿದ್ದ ಬಿಸಿಲಿನ ಝಳವೂ ಒಳಗಿನ ಹೊಗಿಯೂ ಸೇರಿ ಅವಳ ತಲೆಯನ್ನು ಕೆಂಡ ಮಾಡಿದ್ದವು. ಮಗ ಭರ್ಮನನ್ನು ಕೂಗಿದಳು. ಅವನಿಂದ ಯಾವ ಸದ್ದೂ ಬರಲಿಲ್ಲ. ಹಿಂದಿನ ಓಣಿಯ ನಾಗವ್ವನ ಮಗಳು ಲಚುಮಿ ಬಂದು, 'ಯತ್ತಿ, ಅದಿಯೇನ್‌ಬೆ ಮನಿಯಾಗ?' ಅಂತಂದು 'ನಮ್ಮವ್ವ ಮೊನ್ನಿ ಕಸಬರಿಗಿ ಕೊಂಡಿದ್ಲಂತಲ್ಲ, ಅದರ ರೊಕ್ಕ ಕೊಟ್ಟು ಕಳಿಸ್ಯಾಳ' ಎನ್ನುತ್ತಲೇ ಇಪ್ಪತ್ತರ ನೋಟೊಂದನ್ನ ಮಾದೇವಿಯ